# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್.ಉಪಲೋಕ್/ಎಂ.ವೈ.ಎಸ್-8998/2017/ಡಿಆರ್ಇ-5

ಬಹುಮಹಡಿಗಳ ಕಟ್ಟಡ
ಡಾ: ಅಂಬೇಡ್ಕರ್ ವೀಧಿ
ಬೆಂಗಳೂರು-560 001
ದಿನಾಂಕ:25-01-2018

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ**

ವಿಷಯ: (1) ಶ್ರೀ ಧರ್ಮಪ್ಪ, ಪ್ರಾಥಮಿಕ ಶಾಲಾ ಶಿಕ್ಷಕ, ಬಾಚೀಹಳ್ಳಿ ಗ್ರಾಮ, ಕಿತ್ತಾನೆ ಅಂಚೆ, ಕಟ್ಟಾಯ ಹೋಬಳಿ, ಹಾಸನ ತಾಲ್ಲೂಕು ಮತ್ತು ಜಿಲ್ಲೆ ಮತ್ತು (2) ಶ್ರೀ ಬಿ.ಎ. ಜಗದೀಶ, ಕೆ.ಎ.ಎಸ್., ವಿಶೇಷ ಭೂಸ್ವಾಧೀನಾಧಿಕಾರಿಗಳು, ಹೇಮಾವತಿ ಜಲಾಶಯ ಯೋಜನೆ, ಹಾಸನ ಇವರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ.

****

ಈ ದೂರನ್ನು ಶ್ರೀ ರಾಜೇಗೌಡ ತಂದೆ ಲಕ್ಕೇಗೌಡ, ವಾಸ: ಬಾಚೀಹಳ್ಳಿ, ಕಟ್ಟಾಯ ಹೋಬಳಿ, ಹಾಸನ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ಇವರು (1) ಧರ್ಮಪ್ಪ, ಪ್ರಾಥಮಿಕ ಶಾಲಾ ಶಿಕ್ಷಕ, ಬಾಚೀಹಳ್ಳಿ ಗ್ರಾಮ, ಕಿತ್ತಾನೆ ಅಂಚೆ, ಕಟ್ಟಾಯ ಹೋಬಳಿ, ಹಾಸನ ತಾಲ್ಲೂಕು ಮತ್ತು ಜಿಲ್ಲೆ ಮತ್ತು (2) ಶ್ರೀ ಬಿ.ಎ. ಜಗದೀಶ, ಕೆ.ಎ.ಎಸ್., ವಿಶೇಷ ಭೂಸ್ವಾಧೀನಾಧಿಕಾರಿಗಳು, ಹೇಮಾವತಿ ಜಲಾಶಯ ಯೋಜನೆ, ಹಾಸನ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದಾಖಲಿಸಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಬಾಚೇಹಳ್ಳಿ ಗ್ರಾಮದ ಸರ್ವೆ ನಂ.83 ರಲ್ಲಿ 4 ಎಕರೆ ಜಮೀನು ತಮ್ಮ ತಾಯಿ ಲಕ್ಷ್ಮಮ್ಮ ಇವರ ಹೆಸರಿನಲ್ಲಿತ್ತು. ನಮ್ಮ ತಾಯಿ ಮರಣ ಹೊಂದಿದ ನಂತರ ನನ್ನ ಹಾಗೂ ನನ್ನ ಇಬ್ಬರು ತಮ್ಮಂದಿರಾದ ತಿಮ್ಮೇಗೌಡ ಮತ್ತು ಕೃಷ್ಣೇಗೌಡ ಇವರ ಹೆಸರಿಗೆ ಜಂಟಿ ಖಾತೆ ಇರುತ್ತದೆ. ಸದರಿ ಜಮೀನಿನ ಪೈಕಿ 1 ಎಕರೆ 15 ಗುಂಟೆ ಹೇಮಾವತಿ ಜಲಾಶಯ ಯೋಜನೆಗಾಗಿ ಭೂಸ್ವಾಧೀನಪಡಿಸಿ ಕೊಳ್ಳಲಾಗಿದೆ. 2009 ರಲ್ಲಿ ಬೆಳೆ ಪರಿಹಾರವನ್ನು ಕೊಟ್ಟಿರುತ್ತಾರೆ. ಅವಾರ್ಡ ಅನ್ನು ಜವರೇಗೌಡರ ಹೆಸರಿಗೆ ಮಾಡಿರುತ್ತಾರೆ. ಜವರೇಗೌಡನ ಮಗ ಧರ್ಮಪ್ಪ ಮತ್ತು ಭೂಸ್ವಾಧೀನಾಧಿಕಾಗಿಗಳು ಶ್ಯಾಮಿಲಾಗಿ ಪರಿಹಾರದ ಹಣವನ್ನು ತಾವೇ ತೆಗೆದುಕೊಂಡಿದ್ದಾರೆ. ಆದ್ದರಿಂದ, ಎದುರದಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ನನ್ನ ತಂದೆ ಜವರೇಗೌಡ ಇವರು ಸರ್ವೆ ನಂ.83 ರಲ್ಲಿ 1 ಎಕರೆ 15 ಗುಂಟೆ ಜಮೀನನ್ನು ಮತ್ತು ಸರ್ವೆ ನಂ.100, 102 ರಲ್ಲಿ ಸಹ ಭೂಸ್ವಾಧೀನಗೊಂಡು ಘೋಷಣೆ ಮತ್ತು ಅವಾರ್ಡ ರಚನೆಯಾಗಿದೆ. ದೂರುದಾರರು ತಕರಾರು ಸಲ್ಲಿಸಿದ್ದರಿಂದ ವಿಚಾರಣೆ ನಡೆದಿದೆ. ವಿಚಾರಣೆಯಲ್ಲಿ ಭೂಮಾಪಕರನ್ನು ನಿಯೋಜಿಸಿ ಸರ್ವೆ ಮಾಡಿಸಲಾಗಿದೆ. ಭೂಸ್ವಾಧೀನಾವಾದ ಎಲ್ಲಾ ಜಮೀನುಗಳು ನಮ್ಮ ತಂದೆಗೆ ಸಂಬಂಧಿಸಿದ್ದು ಅಂತ ತಿಳಿದು ಬಂದ ನಂತರ ವಿಶೇಷ ಭೂಸ್ವಾಧೀನಾಧಿಕಾರಿಗಳು, ತಕರಾರುದಾರರ ಅರ್ಜಿಯನ್ನು ತಿರಸ್ಕರಿಸಿ ದಿನಾಂಕ: 31-3-2017 ರಂದು ಕಲಂ 30/11-12 ರಲ್ಲಿ ಆದೇಶವನ್ನು ಹೊರಡಿಸಿದ್ದಾರೆ. ದೂರುದಾರರಿಗೆ ಸಂಬಂಧಿಸಿದ ಸರ್ವೆ ನಂ.93 ರಲ್ಲಿ ಯಾವುದೇ ಜಮೀನು ಭೂಸ್ವಾಧೀನವಾಗಿಲ್ಲ. ಆದ್ದರಿಂದ, ದೂರನ್ನು ಮುಕ್ತಾಯಗೊಳಿಸಲು ಕೋರಿದ್ದಾರೆ.

(ಬಿ) 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ವಿವಾದಿತ ಜಮೀನಿನ ಹಕ್ಕುಗಾರಿಕೆ ಮತ್ತು ಸ್ವಾಧೀನಾನುಬೋಗದ ಆಧಾರದ ಮೇಲೆ ಪುನಃ ಸರ್ವೆ ಮಾಡಿಸಲಾಗಿದೆ. ಸರ್ವೆ ನಂ.83 ರ ಪೈಕಿ ದುರಸ್ಥಾಗಿರುವ ಜಮೀನುಗಳನ್ನು ಸಹ ಸರ್ವೆ ಮಾಡಿಸಲಾಗಿದೆ. ಸರ್ವೆ ನಂ: 93 ರಲ್ಲಿ 18 ಗುಂಟೆ ಜಮೀನಿನಲ್ಲಿ ಕಾಲುವೆ ಆಗಿ ಹೋಗಿದೆ. ಆದರೆ ಭೂಸ್ವಾಧೀನ ಆಗಿಲ್ಲದ ಕಾರಣ ಕೋರಿಕೆ ಇಲಾಖೆಯಿಂದ ಹೊಸ ಪ್ರಸ್ತಾವನೆ ಸಲ್ಲಿಸಲು ಕೋರಿ ಸಂವಹನ ಮಾಡಲು ತೀರ್ಮಾನಿಸಿದೆ. ಸದರಿ ಜಮೀನು ತಕರಾರುದಾರರಿಗೆ ಸಂಬಂಧಿಸಿದ್ದು, ಇದುವರೆಗೂ ಭೂಸ್ವಾಧೀನ ಆಗಿರುವುದಿಲ್ಲ. ದೂರುದಾರರು ಹತಾಶೆಯದಿಂದ ಆರೋಪವನ್ನು ಮಾಡಿದ್ದಾರೆ. ಆದ್ದರಿಂದ, ದೂರನ್ನು ವಜಾ ಮಾಡಲು ಕೋರಿಕೊಂಡಿದ್ದಾರೆ.

4. ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ.

(ಎ) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಜವರೇಗೌಡರಿಗೆ 8 ಜನ ಮಕ್ಕಳಿದ್ದರು. ಅವರಿಗೆಲ್ಲಾ ಪರಿಹಾರವನ್ನು ಪಾವತಿಸಿಲ್ಲ. ನಾನು ಕೇಳಲು ಹೋದರೆ ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ. ಆದ್ದರಿಂದ, 1ನೇ ಎದುರುದಾರರ ದಾಖಲೆಗಳನ್ನು ಸೃಷ್ಠಿಸಿ ಪರಿಹಾರದ ಹಣವನ್ನು ಪಡೆದುಕೊಂಡಿದ್ದಾರೆ ಮತ್ತು ಅವರಿಗೆ 2ನೇ ಎದುರುದಾರರು ಸಹಾಯ ಮಾಡುತ್ತಿದ್ದಾರೆ ಅಂತ ನಮೂದಿಸಿದ್ದಾರೆ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. 2ನೇ ಎದುರುದಾರರು ಮಾಡಿರುವ ಆದೇಶದಲ್ಲಿ ಸರ್ವೆ ನಂ.93 ರಲ್ಲಿ 18 ಗುಂಟೆ ಜಮೀನು ತಕರಾರುದಾರರಿಗೆ ಸಂಬಂಧಿಸಿದ್ದರಲ್ಲಿ ಕಾಲುವೆ ಹಾಯ್ದು ಹೋಗಿದೆ. ಆದರೆ ಸದರಿ ಜಮೀನು ಭೂಸ್ವಾಧೀನವಾಗಿಲ್ಲ. ಕೋರಿಕೆ ಇಲಾಖೆಯಿಂದ ಹೊಸ ಪ್ರಸ್ತಾವನೆ ಸಲ್ಲಿಸಲು ಕೋರಿ ಸಂವಹನ ಮಾಡಲು ತೀರ್ಮಾನಿಸಿದೆ ಅಂತ ಹೇಳುತ್ತಿದ್ದಾರೆ. ಆದರೆ ಈ ವಿಷಯದಲ್ಲಿ ಏನು ಪ್ರಗತಿಯಾಗಿದೆ ಎನ್ನುವ ಬಗ್ಗೆ 2ನೇ ಎದುರುದಾರರು ವಿವರಿಸುತ್ತಿಲ್ಲ. 1ನೇ ಎದುರುದಾರರಿಗೆ ಅವಾರ್ಡ ಆಗಿರುವ ಪರಿಹಾರವನ್ನು ಅವರೊಬ್ಬರೇ ತೆಗೆದುಕೊಂಡಿದ್ದರೇ ಜವರೇಗೌಡರ ಉಳಿದ ವಾರಸುದಾರರು ತಕರಾರು ಸಲ್ಲಿಸಬಹುದಾಗಿದೆ, ದೂರುದಾರರಿಗೆ ತಕರಾರು ಮಾಡಲು ಬರುವುದಿಲ್ಲ. ಆದರೆ ಕಲಂ 30 ಕರ್ನಾಟಕ ಭೂಸ್ವಾಧೀನ ಕಾನೂನಿನ ಅಡಿಯಲ್ಲಿ ಬರುವ ವಿವಾದಗಳನ್ನು ಸಕ್ಷಮ ನ್ಯಾಯಾಲಯಕ್ಕೆ ಕಳುಹಿಸಬೇಕು ಅಂತ ಸ್ಪಷ್ಟವಾಗಿ ವಿಧಿಸಲಾಗಿದೆ.

6. ಕರ್ನಾಟಕ ಭೂಸ್ವಾಧೀನ ಅಧಿನಿಯಮ ಕಲಂ 3(ಡಿ) ರಲ್ಲಿ : **the expression "Court" means a principal Civil Court of original jurisdiction, unless the appropriate Government has appointed (as it is hereby empowered to do) a special judicial officer within any specified local limits to perform the functions of the Court under this Act.**

(ಎ) ಕರ್ನಾಟಕ ಭೂಸ್ವಾಧೀನ ಅಧಿನಿಯಮ ಕಲಂ 30 ರಲ್ಲಿ : **30.Disputes as to apportionment:- When the amount of compensation has been settled under section 11, if any dispute arises as to the apportionment of the same or any part thereof, or as to the persons to whom the same to any part thereof is payable, the Collector may refer such dispute to the decision of the Court** ಅಂತ ವಿಧಿಸಲಾಗಿದೆ.

7. 2ನೇ ಎದುರುದಾರರು ಕಲಂ 30 ಅಡಿಯಲ್ಲಿ ವಿವಾದಿತ ಪ್ರಕರಣವನ್ನು ಸಂಬಂಧಪಟ್ಟ ಸಿವಿಲ್ ನ್ಯಾಯಾಲಯಕ್ಕೆ ಕಳುಹಿಸದೇ ತಾವೇ ನಿರ್ಧಾರವನ್ನು ಕೈಗೊಂಡು ಕರ್ತವ್ಯಲೋಪ ಎಸಗಿರುತ್ತಾರೆ ಎನ್ನಲು ಸಾಕಷ್ಟು ಆಧಾರಗಳಿವೆ.

8.	1ನೇ ಎದುರುದಾರರು ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದು, ಸದರಿಯವರ ವಿರುದ್ಧ ಯಾವುದೇ ಕರ್ತವ್ಯಲೋಪ ಕಂಡುಬರುತ್ತಿಲ್ಲ. ಆದ್ದರಿಂದ, 1ನೇ ಎದುರುದಾರರ ವಿರುದ್ಧ ಪ್ರಕರಣವನ್ನು ಕೈಬಿಡಲಾಗಿದೆ.

9.	2ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(i)(ii) ಮತ್ತು (iii)ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬರುವುದರಿಂದ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ 2ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

10.	ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

27/1/18.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ